# ಎಂಥಾ ಸೌಂದರ್ಯ ನೋಡು; ಕರುನಾಡ ಕೊಡಗು!

**ಮಹಾಮಳೆಗೆ ತತ್ತರಿಸಿಹೋದ ಕೊಡಗು ಅದಕ್ಕೂ ಮುನ್ನ ಸೌಂದರ್ಯದ ನೆಲೆವೀಡು ಆಗಿತ್ತು. ಕುಟುಂಬ ಸಮೇತ ಹೋಗಿ ಅಲ್ಲಿನ ನಿಸರ್ಗ ಸೌಂದರ್ಯಸಿರಿಯನ್ನು ಸವಿದು ಬಂದ ನಮಗೆ ಅದು ಎಂದೆಂದಿಗೂ ಮರೆಯಲಾಗದ ಸವಿನೆನಪಾಗಿ ಉಳಿದಿದೆ.**

■ ಕೆ. ಲೀಲಾ ಶ್ರೀನಿವಾಸ್

ಕೆಲವೊಮ್ಮೆ ಅಪರೂಪಕ್ಕೆ ಹೋದ ಪ್ರವಾಸಿ ಸ್ಥಳ ಮನದಾಳದಲ್ಲಿ ಅಚ್ಚೊತ್ತಿ ನಿಂತು ಸದಾ ಸವಿನೆನಪಾಗಿಯೇ ಇರುತ್ತದೆ. ಇತ್ತೀಚೆಗೆ ಮಹಾಮಳೆಯಿಂದ ತತ್ತರಗೊಂಡ ಕೊಡಗು ಅದಕ್ಕೂ ಮುನ್ನ 'ದಕ್ಷಿಣದ ಕಾಶ್ಮೀರ' ಎಂಬ ಹೆಗ್ಗಳಿಕೆ ಗಳಿಸಿ ಅತ್ಯಂತ ಸುಂದರ ಊರು ಆಗಿತ್ತು. ವರುಣನ ಅವಕೃಪೆಗೆ ತುತ್ತಾದ ಕಾರಣ ಕೊಡಗು ಜಿಲ್ಲೆ ಬಹಳ ಹೊಡೆತ ಅನುಭವಿಸಿತ್ತು.
ಎರಡು ವರ್ಷ ಹಿಂದೆ ಕೊಡಗು ಸುತ್ತಿ ಬಂದ ನಾವು ಆ ನೆನಪನ್ನು ಬಾಳಬುತ್ತಿಯಲ್ಲಿ ತುಂಬಿಕೊಂಡಿದ್ದೇವೆ. ಅದು 2016ರ ಫೆಬ್ರುವರಿ, ನನ್ನ ಪತಿಗೆ 60 ವರ್ಷ ತುಂಬಿತ್ತು. ಅದರ ಸ್ಮರಣಾರ್ಥ ನನ್ನ ನಾದಿನಿಯರು, ಮಗಳು, ಅಳಿಯ, ಮೊಮ್ಮಕ್ಕಳೆಲ್ಲರೂ ಸೇರಿ ಭೂಸ್ವರ್ಗ ಕೊಡಗಿಗೆ 3 ದಿನಗಳ ಪ್ರವಾಸ ಯೋಜಿಸಿದ್ದರು. ಫೆಬ್ರುವರಿ 15ರಂದು ನಸುಕಿನಲ್ಲಿ ಮಿನಿ ಬಸ್ ಏರಿ 12 ಜನ ಹೊರಟವರು ರಾಮನಗರ, ಮೈಸೂರು, ಹುಣಸೂರು, ಸಿದ್ದಾಪುರ, ಕುಶಾಲನಗರ, ವಿರಾಜಪೇಟೆ ಮುಂದೆ 13 ಕಿ.ಮೀ ಕಾಡಿನೊಳಗೆ ಮಹೀಂದ್ರಾ ಕ್ಲಬ್‌ನವರ ಭವ್ಯ ಸುರಮ್ಯ ರೆಸಾರ್ಟ್ ತಲುಪಿದೆವು.

ವ್ಹಾವ್! ನಮಗೆ ಕುಂಕುಮ ಹಚ್ಚಿ ಕೈಗೆ ವೆಲ್‌ಕಮ್ ಡ್ರಿಂಕ್ಸ್ ಕೊಟ್ಟು ಸ್ವಾಗತ. ತಮ್ಮದೇ ವಿಶಿಷ್ಟ ವಿನ್ಯಾಸದ ವಾಹನದಲ್ಲಿ ರೂಮುಗಳಿಗೆ ಕಳಿಸಿದರು. ಮಧ್ಯಾಹ್ನ ಊಟದ ನಂತರ ಕುಶಾಲನಗರದ ಸಮೀಪದ ಬೈಲುಕುಪ್ಪೆಗೆ ಹೊರಟೆವು. ಟಿಬೆಟಿಯನ್ನರ ಆಚಾರ ವಿಚಾರ, ಶಾಂತಿ ಪ್ರಿಯತೆ, ಬುದ್ದ ದೇವಾಲಯ, ಲಾಮಾಕ್ಯಾಂಪ್, ಗೋಲ್ಡನ್ ಟೆಂಪಲ್ ಎಲ್ಲಕ್ಕೂ ಮಿಗಿಲಾಗಿ ಅವರ ಅನವರತ ಚೊಕ್ಕತನ, ಸ್ನೇಹಪರತೆ ನಿಜಕ್ಕೂ ಅನನ್ಯ!
ಸುಂದರ ಕೋಣೆಗಳು, ಸೊಗಸಾದ ಊಟ, ರಾತ್ರಿ ಹೊರಗಿನ ಕಾನನದಲ್ಲಿ ನವಿಲುಗಳ ಕೂಗು, ಭರ್ಜರಿ ನಿದ್ರೆ! ಸಂಜೆ ಮಕ್ಕಳು, ದೊಡ್ಡವರು ಕೂಡಿ ಆಡಿದ್ದೇ ಆಡಿದ್ದು. ಈಜು, ಮೋಜು, ಪ್ರಮೋದ, ಆಮೋದ!

ಮರುದಿನ ಮುಂಜಾನೆ ದುಬಾರೆ ಅರಣ್ಯಕ್ಕೆ ಭೇಟಿ. ವೈವಿಧ್ಯಮಯ ಆನೆಗಳ ಹಿಂಡು ಅವುಗಳ ಆಟ, ಜಳಕ, ಸೊಂಡಿಲ ಪುಳಕ ಆನಂದತುಂದಿಲರಾಗಿದ್ದೆವು. ಸಮೀಪದ ನಿಸರ್ಗಧಾಮದಲ್ಲಿ ತೂಗು ಸೇತುವೆ ಬಿಟ್ಟರೆ ಉಳಿದುದೆಲ್ಲ ನಿಸರ್ಗವೇ. ಒಣ ಹುಲ್ಲು, ಬರಡುಮರ, ಮುತುವರ್ಜಿ ಇಲ್ಲದ ಮರಗಳ




ಮೇಲಿನ ಮನೆಗಳು. ಏಕೋ ರೇಜಿಗೆ ಹುಟ್ಟಿಸಿದವು. ಮುಂದಿನದು ಓಂಕಾರೇಶ್ವರ ದೇಗುಲ ಸೂಪರ್! ಕೊಡಗಿನ ಆಗಿನ ಅರಸರಾದ ಲಿಂಗರಾಜರು ಕಟ್ಟಿಸಿದ ದೇಗುಲ ಒಂದು ಪಾರ್ಶ್ವದಿಂದ ಮಸೀದಿಯಂತೆ ತೋರುವುದು ಒಂದು ವಿಸ್ಮಯ!. ವಿಶಾಲ ಪ್ರಾಂಗಣ, ಶುದ್ಧ ಪರಿಸರದ ಚಿತ್ತಾರ, ಹೊರಬದಿಯ ಕೊಳದಲ್ಲಿ ಎಗ್ಗುಸಿಗ್ಗಿಲ್ಲದೇ ವಿಹರಿಸುವ ಮೀನುಗಳು, ಹಂಸಗಳು ಅರೆಕ್ಷಣ ಇಹದ ಪರಿವೆ ಮರೆತು ಖುಷಿಯಾಗಿದ್ದೆವು. ಸಮೀಪದ ರಾಜಾಸೀಟ್, ಪುಟಾಣಿ ರೈಲು ರಂಜಿಸಿದವು.

ಮೂರನೆಯ ದಿನ ಬೆಳಗಿನಿಂದಲೇ ಆತಂಕ. ಈ ಧವಳ ಧರಿತ್ರಿ ಕೊಡಗಿಗೆ ವಿದಾಯ ಹೇಳಬೇಕಲ್ಲ? ಬೆಳಿಗ್ಗೆಯೇ ಭಾಗಮಂಡಲದ ಭೃಗಂಡೇಶ್ವರನ ದೇವಳಕ್ಕೆ ಹೋದೆವು. ಇಲ್ಲಿ ಕಾವೇರಿ, ಕನ್ನಿಕೆ ಹಾಗೂ ಸುಜ್ಯೋತಿ ನದಿಗಳ ಸಂಗಮವಿದೆ. ಇಲ್ಲಿಂದ 8 ಕಿ.ಮೀ ದೂರದಲ್ಲಿ ಬೆಟ್ಟದ ಮೇಲೆ ಕಾವೇರಿ ನದಿಯ ಉಗಮಸ್ಥಾನ ತಲಕಾವೇರಿ ಇದೆ. ಪ್ರತಿವರ್ಷ ಅಕ್ಟೋಬರ್ 17ರಂದು ಇಲ್ಲಿ ತೀರ್ಥೋದ್ಭವವಾಗಲಿದ್ದು ಅಂದು ಲಕ್ಷಾಂತರ ಜನರು ಅದನ್ನು ಕಣ್ತುಂಬಿಕೊಳ್ಳುತ್ತಾರೆ. ಮಡಿಕೇರಿಯಿಂದ ಸುಮಾರು 8 ಕಿ.ಮೀ ದೂರದಲ್ಲಿ ಅಬ್ಬೆ ಜಲಪಾತ ಹಾಗೂ ವಿರಾಜಪೇಟೆಯಿಂದ 15 ಕಿ.ಮೀ ದೂರದಲ್ಲಿ ಇರುವ ಇರ್ಪು ಜಲಪಾತ ತಮ್ಮ ಭೋರ್ಗರೆತದಿಂದ, ವಯ್ಯಾರದಿಂದ ಹೃನ್ಮನ ಸೆಳೆಯುತ್ತದೆ. ಅಂತೂ 3 ದಿನದ ಪ್ರವಾಸ ಮುಗಿಸಿ ವಾಪಸ್ ಬೆಂಗಳೂರಿಗೆ ಹೋಗಲು ಮಿನಿ ಬಸ್ ಏರಿದಾಗ ಎಲ್ಲರ ಮೊಗದಲ್ಲಿಯೂ ಅವಿಸ್ಮರಣೀಯ ಅಸೀಮ ಆನಂದ. ಜೊತೆಗೆ ಕೊಡಗು ಬಿಟ್ಟು ಹೋಗಬೇಕೆನ್ನುವ ಬೇಸರ. ಬಸ್ ಸಾಗಿದಂತೆಲ್ಲ 3 ದಿನ ಸುಖಾನುಭೂತಿ ನೀಡಿದ್ದ ನಿಸರ್ಗ ಸೌಂದರ್ಯ, ಎಲ್ಲೆಡೆ ಹಚ್ಚ ಹಸಿರು, ಕಾನನ, ದುಂಬಿಗಳ ಝೇಂಕಾರ, ಬೆಟ್ಟ, ಗುಡ್ಡ, ಪರ್ವತ, ಪ್ರಪಾತಗಳು, ಗಿರಿ, ಕಂದರ ಜಲಪಾತಗಳು, ಕ್ಷಿತಿಜದೆತ್ತರದ ಮರಗಳ ಕಿನ್ನರಲೋಕ ಮರೆಯಾಗುತ್ತ ಬೆಂಗಳೂರು ಸಮೀಪಿಸಿದಂತೆ ಮುಗಿಲೆತ್ತರದ ಕಾಂಕ್ರೀಟ್ ಕಾಡು, ಮಲಿನ ಪರಿಸರ, ಕೊಚ್ಚೆ, ಬೇಕಾಬಿಟ್ಟಿ ಚಲಿಸುವ ವಾಹನಗಳು, ಸದ್ದುಗದ್ದಲದಿಂದ ತಮ್ಮ ಇರವು ತೋರಿಸಿದ್ದವು.

ಇಂದು ಆ ಕೊಡಗಿನ ಪ್ರಕೃತಿ ಮಾತೆ ಮುನಿದು ವೈಪರೀತ್ಯ ತೋರಿ ವಿನಾಶಗೊಳಿಸಿದ್ದರೂ ಅಂದಿನ ಆ ಸುಂದರ ಪ್ರವಾಸ ಇಂದಿಗೂ ನನ್ನ ಸ್ಮೃತಿಪಟಲದಲ್ಲಿ ಅಚ್ಚೊತ್ತಿದಂತಾಗಿ ಧನ್ಯೋಸ್ಮಿ ಎನ್ನುತ್ತೇನೆ. ■